KAUK710013852019

| |
|---|
| **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಕುಮಟಾ** |
| **ಉಪಸ್ಥಿತರು**<br>**ಶ್ರೀಮತಿ ವರ್ಷ ಶ್ರೀ,**<br>**ಬಿ.ಎ.(ಎಲ್), ಎಲ್.ಎಲ್.ಬಿ.,**<br>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಕುಮಟಾ |
| **ಮೂಲಾ ದಾವಾ ಸಂಖ್ಯೆ : 86/2023**<br>**ದಿನಾಂಕ 28ನೇ ನವಂಬರ್ 2024** |

| | |
|---|---|
| **ವಾದಿಯರುಃ** | ಶಂಕರ ನಾರಾಯಣ ಅಂಬಿಗ,<br>**(ವಾದಿಯರ ಪರ ಶ್ರೀ ಎನ್ ಎಮ್ ಹೆಚ್ ವಕೀಲರು)** |

ವಿರುದ್ಧ

| | |
|---|---|
| **ಪ್ರತಿವಾದಿಯರುಃ** ) | ಮಾದೇವ ಸುಣ್ತಮ್ಮ ಅಂಬಿಗ<br>**(ಪ್ರ. ವಾದಿ ಪರ ಬಿಡಿಎಸ್ ವಕೀಲರು,)** |

***ಮಧ್ಯಾಂತರ ಅರ್ಜಿ ಸಂಖ್ಯೆ – V***

| | |
|---|---|
| **ಅರ್ಜಿದಾರರುಃ** | ಶಂಕರ ನಾರಾಯಣ ಅಂಬಿಗ,<br>----- **ವಾದಿಯರು** |

ವಿರುದ್ಧ

| | |
|---|---|
| **ಎದುರುದಾರರುಃ** | ಮಾದೇವ ಸುಣ್ತಮ್ಮ ಅಂಬಿಗ<br>------ **ಪ್ರತಿವಾದಿಯರು** |

| | | |
|---|---|---|
| 1. | ಅರ್ಜಿಯನ್ನು ಸಲ್ಲಿಸುವ ನಿಬಂಧನೆ | ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ **26** ನಿಯಮ **9** ಮತ್ತು **10** ಸಹವಾಚಕ **151** ರಡಿಯಲ್ಲಿ ಸಲ್ಲಿಸಿದ ಅರ್ಜಿ**.** |
| 2. | ಕೋರಲಾದ ಪರಿಹಾರ | ಕೋರ್ಟ್ ಕಮಿಷನರ್ ನೇಮಕ |
| 3. | ಅರ್ಜಿಯನ್ನು ಸಲ್ಲಿಸಿದ ದಿನಾಂಕ | 19.11.2024 |
| 4. | ಅರ್ಜಿಯ ಸಂಖ್ಯೆ | V |
| 5. | ಅಕ್ಷೇಪಣೆಯನ್ನು ಸಲ್ಲಿಸಿದ ದಿನಾಂಕ | 26.11.2022 |
| 6. | ಆದೇಶದ ದಿನಾಂಕ | 28.11.2024 |

**ಅರ್ಜಿದಾರರು / ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 9 ಮತ್ತು 10 ಸಹವಾಚಕ 151 ರಡಿಯಲ್ಲಿ ಸಲ್ಲಿಸಿದ ಮಧ್ಯಾಂತರ ಅರ್ಜಿ ಸಂಖ್ಯೆ – V ರ ಮೇಲಿನ ಆದೇಶ**

ಅರ್ಜಿದಾರರು /ವಾದಿಯರು ಈ ಮಧ್ಯಾಂತರ ಅರ್ಜಿಯನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 26 ನಿಯಮ 9 ಮತ್ತು 10 ಸಹವಾಚಕ 151 ರಡಿಯಲ್ಲಿ ದಾಖಲು ಮಾಡಿರುತ್ತಾರೆ. ಅವರು ಕೋರಿಕೊಳ್ಳುವುದೇನೆಂದರೆ, ಸದರಿ ದಾವಾದದಲ್ಲಿ ಸರ್ವೆಯರವರನ್ನು ಕೋರ್ಟ್ ಕಮೀಷನರ್ ಅಂತಾ ನೇಮಕ ಮಾಡಿ ವತ್ತುವರಿಯಾದ ಜಾಗವನ್ನು ಗುರುತಿಸುವ ಕುರಿತು ಮಾನ್ಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಕುಮಟಾ ನೇಮಕ ಮಾಡಬೇಕಾಗಿ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

0**2.** **ಅರ್ಜಿದಾರರ / ವಾದಿಯವರು ಪ್ರಮಾಣ ಪತ್ರಿಕೆ ಮತ್ತು ವಾದ ಪತ್ರದ ಪ್ರಮುಖ ಸಂಗತಿಗಳು**

ಅರ್ಜಿದಾರರು/ವಾದಿಯವರು ಸದರಿ ಅರ್ಜಿಗೆ ಪ್ರಮಾಣಪತ್ರ ಸಲ್ಲಿಸಿದ್ದು ಅವರು ಪ್ರಮಾಣಿಕರಿಸುವುದೇನೆಂದರೆ, ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಪ್ರತ್ಯಕ್ಷ ಖುಲ್ಲಾ ಕಬ್ಜದ ಪರಿಹಾರಕ್ಕಾಗಿ ಈ ದಾವೆಯನ್ನು ಸಲ್ಲಿಸಿರುವುದಾಗಿರುತ್ತದೆ. ಈ ದಾವೆಯು ತನ್ನ ಸಾಕ್ಷಿ ವಿಚಾರಣೆಗೆಂದು ನಿಗದಿಯಾಗಿದ್ದು ಪ್ರತಿವಾದಿಯು ನ್ಯಾಯಾಲಯದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಪ್ರತಿವಾದಿಯ ಜಾಗವನ್ನು ತಾನೇ ಅತೀಕ್ರಮಣೇ ಮಾಡಿರುವುದಾಗಿ ಪ್ರತಿಪಾದನೆಯನ್ನು ತೆಗೆದುಕೊಂಡಿರುತ್ತಾರೆ. ತಾನು ದಾವಾ ಆಸ್ತಿಯನ್ನು ಈಗಾಗಲೇ ಹದುಬಸ್ತು ಸರ್ವೆ ಮಾಡಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿ

ಸದರಿ ದಾಖಲೆಯು ಈಗಾಗಲೇ ನಿಶಾನೆಯಾಗಿ ಗುರುತಿಸಿದ್ದು ಇರುತ್ತದೆ. ಆದ್ದರಿಂದ ಈ ಹಂತದಲ್ಲಿ ದಾವಾ ಸ್ಥಳವನ್ನು ಯಾರು ಅತೀಕ್ರಮಣ ಮಾಡಿದ್ದಾರೆಂಬುದನ್ನು ತಿಳಿಯುವುದು ಅತ್ಯಂತ ಅವಶ್ಯಕವಾಗಿದ್ದು, ಈ ಕಾರಣದಿಂದಾಗಿ ವಾದಿಯು ಈ ಅರ್ಜಿಯನ್ನು ಸಲ್ಲಿಸಿರುವುದಾಗಿ ಹೇಳಿರುತ್ತಾರೆ.

03. ಪ್ರತಿ<u>ವಾದಿಯು / ಎದುರುದಾರರು ತಮ್ಮ ತಕರಾರಿನಲ್ಲಿ ತಿಳಿಸಿದ ಪ್ರಮುಖ ಸಂಗತಿಗಳು</u>

ಪ್ರತಿವಾದಿಯು/ಎದುರುದಾರರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದು, ದಿಃ 26.11.2024 ರಂದು ತಕರಾರನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಯವರು ತಮ್ಮ ತಕರಾರಿನಲ್ಲಿ ಹೇಳಿರುವುದೇನೆಂದರೆ, ಸದರಿ ಅರ್ಜಿಯು ಯಾವುದೇ ಸಕಾರಣಗಳನ್ನು ಒಳಗೊಂಡಿರದೆ ಇರುವುದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೇಳಿಕೊಂಡಿರುತ್ತಾರೆ. ವಾದಿಯ ಆಕ್ಷೇಪಣೆಯ ಅರ್ಜಿಯ ನ್ಯಾಯೋಚಿತ ನ್ಯಾಯ ನಿರ್ವಹಣೆಗಾಗಿ ಇರುವ ತಾತ್ಪರ್ಯ ಏನೆಂದರೆ, ವಾದಿಯ ಹಕ್ಕಿನ ಪಹಣಿಯಲ್ಲಿ ಪ್ರತ್ಯೇಕವಾಗಿ ಕಂಡುಬಂದಿದ್ದರು ಸಹಾ ನಕ್ಷೆಯಲ್ಲಿ ವಿಂಗಡಣೆಯಾಗಿರುವುದಿಲ್ಲ ವಾದಿಯು ಅವಲಂಬಿಸಿದ ಹದುಬಸ್ತು ಸರ್ವೆ ಕಾಲದಲ್ಲಿ ಅವಶ್ಯಕ ಲಗ್ತದಾರರು ಹಾಜರಿರುವುದಿಲ್ಲ. ವಾದಿಯು ವಸ್ತು ಸ್ಥಿತಿಯನ್ನು ಮುಚ್ಚಿಟ್ಟು ಸುಳು ಕಾರವನ್ನು ತೋರಿಸಿ ಈ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಈ ವಾದಿಯು ಈ ದಾವೆಗೆ ಬೇಕಾಗದ ಅವಶ್ಯಕ ಸಾಕ್ಷಿಗಳನ್ನು ಸೃಷ್ಟಿ ಸುವ ಉದ್ದೇಶದಿಂದ ಹಾಗೂ ದಾವಾ ವಿಚಾಣೆಯನ್ನು ವಿಳಂಬಗೋಳಿಸುವ ಉದ್ದೇಶದಿಂದ ಈ ದಾಖಲಿಸಿದ್ದುದಿರುತ್ತದೆ. ಈ ಅರ್ಜಿಯನ್ನು ಈ ಹಂತದಲ್ಲಿ ಪುರಸ್ಕರಿಸಬಾರದು ಎಂದು ಕೇಳಿಕೊಂಡಿರುತ್ತಾರೆ.

**04.** ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು. ಅರ್ಜಿ ಹಾಗೂ ಕಡತದಲ್ಲಿರುವ ದಾಸ್ತವೇಜುಗಳನ್ನು, ವಾದಪತ್ರ ಹಾಗೂ ಪ್ರತಿವಾದ ಪತ್ರದ ನಿವೇದನೆಗಳನ್ನು ಗಮನಿಸಲಾಯಿತು.

**05.** ಅರ್ಜಿಯ ನ್ಯಾಯೋಜಿತ ಇತ್ಯರ್ಥಕ್ಕಾಗಿ ನ್ಯಾಯಾಲಯದ ಪರಿಗಣನೆಗೆ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

1. **ಅರ್ಜಿದಾರ / ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 4ನ್ನು ಪುರಸ್ಕರಿಸಲು ಕಾರಣವನ್ನು ನೀಡಿರುತ್ತಾರೆಯೇ?**

2. **ಯಾವ ಆದೇಶ?**

**06.** ಅರ್ಜಿಯ ನ್ಯಾಯೋಚಿಕ ಇತ್ಯರ್ಥಕ್ಕಾಗಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿದ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ 1 : ಸಕಾರಾತ್ಮಕವಾಗಿ**

**ಅಂಶ 2 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಂದಾಗಿ**

## ಕಾರಣಗಳು

**07.** **ಅಂಶ 1:** ವಾದಿಯು/ ಎದುರುದಾರರು ಪ್ರಸ್ತುತ ದಾವೆಯನ್ನು ಪ್ರತಿವಾದಿಯ ವಿರುದ್ಧ ಖುಲ್ಲಾ ಕಬ್ಜ ಪರಿಹಾರಕ್ಕಾಗಿ ಹೂಡಿದ್ದು ಇರುತ್ತದೆ.

**08.** ವಾದಿಯು ಈ ಅರ್ಜಿಯನ್ನು ಸಲ್ಲಿಸಿ ಪ್ರತಿವಾದಿಯು ನ್ಯಾಯಾಲಯದಲ್ಲಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಪ್ರತಿವಾದಿಯ ಜಾಗವನ್ನು ತಾನೇ ಅತೀಕ್ರಮಣೇ ಮಾಡಿರುವುದಾಗಿ ಪ್ರತಿಪಾದನೆಯನ್ನು ತೆಗೆದುಕೊಂಡಿರುತ್ತಾರೆ. ತಾನು ದಾವಾ ಆಸ್ತಿಯನ್ನು ಈಗಾಗಲೇ ಹದ್ದು ಬಸ್ತು ಸರ್ವೆ ಮಾಡಿಸಿ ಮಾನ್ಯ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿ ಸದರಿ ದಾಖಲೆಯು ಈಗಾಗಲೇ ನಿಶಾನೆಯಾಗಿ ಗುರುತಿಸಿದ್ದು ಇರುತ್ತದೆ. ಆದ್ದರಿಂದ ಈ ಹಂತದಲ್ಲಿ ದಾವಾ ಸ್ಥಳವನ್ನು ಯಾರು ಅತೀಕ್ರಮಣ ಮಾಡಿದ್ದಾರೆಂಬುದನ್ನು ತಿಳಿಯುವುದು ಅತ್ಯಂತ ಅವಶ್ಯಕವಾಗಿದ್ದು, ಈ ಕಾರಣದಿಂದಾಗಿ ವಾದಿಯು ಈ ಅರ್ಜಿಯನ್ನು ಸಲ್ಲಿಸಿರುವುದಾಗಿ ಹೇಳಿರುತ್ತಾರೆ, ಆದ್ದರಿಂದ ವಾದಿಯು ಈ ಅರ್ಜಿಯನ್ನು ಸಲ್ಲಿಸಿದ್ದು, ಸರ್ವೆ ಕಮಿಷನರ್ ನೇಮಕ ಮಾಡಿದರೆ ವಾದಿಗೆ ಯಾವುದೇ ತೊಂದರೆಯಾಗುವುದಿಲ್ಲ. ಮತ್ತು ನ್ಯಾಯಾ ನಿರ್ಣಯದಲ್ಲಿ ಅನುಕೂಲವಾಗುತ್ತದೆ ಎಂದು ಅರ್ಜಿಯನ್ನು ಪೂರಸ್ಕರಿಸಬೇಕಾಗಿ ಕೇಳಿಕೊಂಡಿರುತ್ತಾರೆ.

**09.** ನ್ಯಾಯಾಲಯದ ಆಯುಕ್ತರನ್ನು ನೇಮಕ ಮಾಡವುದರಿಂದ ದಾವಾ ಸ್ಥಳದಲ್ಲಿನ ನೈಜ ಸಮಸ್ಯೆ ಮತ್ತು ಪರಿಸ್ಥಿತಿಯನ್ನು ಅರಿಯಲು ನ್ಯಾಯಾಲಯಕ್ಕೆ ಸಾಧ್ಯವಾಗುತ್ತದೆ. ಈ ಆಯುಕ್ತರ ನೇಮಕದಿಂದ ಸದ್ರಿ ದಾವೆಯನ್ನು ಶೀಘ್ರ ಹಾಗೂ ನ್ಯಾಯೋಚಿತ ವಿಲೇವಾರಿ ಮಾಡಲು ನ್ಯಾಯಾಲಯಕ್ಕೆ ಅನುಕೂಲವಾಗಬಹುದೆಂದು ಈ ನ್ಯಾಯಾಲಯವು ಅಭಿಪ್ರಾಯ ಪಡುತ್ತದೆ. ಈ ಅರ್ಜಿಯನ್ನು ಪುರಸ್ಕರಿಸುವುದರಿಂದ ಎದುರುದಾರರಿಗೆ ಯಾವುದೇ ಹಾನಿ ಉಂಟಾಗುವುದಿಲ್ಲ.

**10.** ವಾದಿ ಹಾಗೂ ಪ್ರತಿವಾದಿಯರ ನಡುವೆ ಅತೀಕ್ರಮಣ ಕುರಿತಾಗಿ ಅಭಿಪ್ರಾಯಗಳಲ್ಲಿ ವ್ಯತ್ಯಾಸಗಳಿದ್ದು, ಈ ಪ್ರಸ್ತುತ ದಾವೆಯಲ್ಲಿ ದಾವಾ ಆಸ್ತಿಯು ಅತೀಕ್ರಮವಾಗಿದೆಯೇ? ಇಲ್ಲವೋ?ಎಂಬುದನ್ನು ಕಂಡು ಹಿಡಿಯುವುದು ಪ್ರಸ್ತುತ ದಾವೆಯಲ್ಲಿನ ನ್ಯಾಯ ನಿರ್ವಹಣೆಗೆ ಅತ್ಯಂತ ಅವಶ್ಯಕವಾದ ವಿವಾದ್ಯ ಸಂಗತಿಯಾಗಿರುತ್ತದೆ. ಕಾರಣವೇನೆಂದರೆ ಅತೀಕ್ರಮಣ ಆಗಿದೆಯೋ ಅಥವಾ ಇಲ್ಲವೋ ಎಂಬುದನ್ನು ಕಂಡು ಹಿಡಿದ ಪಕ್ಷದಲ್ಲಿ ದಾವೆಯ ಅಂತಿಮ ನಿರ್ಣಯವು ನೇರವಾಗಿ, ನಿರ್ದಿಷ್ಟವಾಗಿ, ಸಾರಭೂತವಾಗಿ ಪಾರದರ್ಶಕತೆಯಿಂದ ಗೋಚರವಾಗುವ ಸ್ಪಷ್ಟ ಸಂಗತಿಗಳು ಕಂಡು ಬರುವುದರಿಂದ ಮತ್ತು **ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯದ ಡಬ್ಲ್ಯೂ ಪಿ ಸಂಖ್ಯೆ: 201274/2024 ರ ಶ್ರೀಷಡಾಕ್ಷರಪ್ಪ ವಿರುದ್ಧ ಕುಮಾರಿ ವಿಜಯಲಕ್ಷ್ಮಿ ಮತ್ತು ಇತರರು** ಪ್ರಕರಣದ ತೀರ್ಪಿನ ವಿಚಾರ ವೈಖರಿ ಹಾಗೂ ಮಾರ್ಗ ಸೂಚಿಗಳಾನುಸಾರ ಮಾನ್ಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕುಮಟಾ ಇವರನ್ನು ಅರ್ಜಿಯ ಉದ್ದೇಶಕ್ಕನುಸಾರವಾಗಿ ನೇಮಿಸುವುದು ಅನಿವಾರ್ಯ ಸಂಗತಿಯಾಗಿರುವುದರಿಂದ ಈ ನ್ಯಾಯಾಲಯವು ಅಂಶ.1ಕ್ಕೆ ಸಕರಾತ್ಮಕವಾಗಿ ಉತ್ತರಿಸಿರುತ್ತದೆ.

**11.** **<u>ಅಂಶ 2 :</u>** ಮೇಲ್ಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ

# ಆದೇಶ

ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 26 ನಿಯಮ 9 ಮತ್ತು 10 ಸಹವಾಚಕ ಕಲಂ 151 ರಡಿಯಲ್ಲಿ ವಾದಿಯು ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 5 ನ್ನು ಪುರಸ್ಕಾರ ಮಾಡಲಾಗಿದೆ.

ಮಾನ್ಯ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ಕುಮಟಾ ಇವರನ್ನು ನ್ಯಾಯಾಲಯದ ಆಯುಕ್ತರು ಎಂದು ನೇಮಿಸಲಾಗಿದೆ. ನ್ಯಾಯಾಲಯದ ಆಯುಕ್ತರು ಅರ್ಜಿಯಲ್ಲಿ ಕೇಳಿಕೊಂಡಂತಹ ಮಾಹಿತಿಗಳನ್ನು ಕಂಡು ಹಿಡಿಯಲು ಪ್ರತ್ಯಾಯೋಜಿಸಲಾಗಿದೆ.

ನ್ಯಾಯಾಲಯ ಆಯುಕ್ತರ ಶುಲ್ಕ ರೂ.3000/-ನ್ನು ನಿಗದಿಪಡಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಕಾರರಿಗೆ ನನ್ನ ಉಕ್ತಲೇಖನದಂತೆ ಗಣಕ ಯಂತ್ರದಲ್ಲಿ ನೇರವಾಗಿ ಬೆರಳಚ್ಚು ಮಾಡಿ, ಗಣಕೀಕರಿಸಿ, ಸರಿಪಡಿಸಿ, ದಿನಾಂಕ 28ನೇ ನವಂಬರ್ 2024ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಲಾಯಿತು)

**(ಶ್ರೀಮತಿ ವರ್ಷ ಶ್ರೀ)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ**
**ಕುಮಟಾ**